## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\2892\2017\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 19/02/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಕೆ.ಕೃಷ್ಣಯ್ಯ ಬಿನ್ ಲೇ.ಕುಣಿಯಯ್ಯ, ವಾರ್ಡ್ ನಂ.2, ವಿನಾಯಕ ಬಡಾವಣೆ, ಚೀರನಹಳ್ಳಿ ರಸ್ತೆ, ಕೆಆರ್ ನಗರ ಪಟ್ಟಣ, ಕೆಆರ್ ನಗರ ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ಕೆ.ಆರ್ ನಗರ ತಾಲ್ಲೂಕ್ ಕೆ.ಆರ್ ನಗರ ಪಟ್ಟಣ, ಚೀರನಹಳ್ಳಿ ರಸ್ತೆ, ವಿನಾಯಕ ಬಡಾವಣೆ, ವಾರ್ಡ್ ನಂ.2ರ ನಿವಾಸಿಯಾದ ಶ್ರೀ.ಕೆ.ಕೃಷ್ಣಯ್ಯ ಬಿನ್ ಲೇ.ಕುಣಿಯಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕ್ ಕೆ.ಆರ್ ನಗರ ಪಟ್ಟಣ ಪುರಸಭೆಯ ಮುಖ್ಯಾಧಿಕಾರಿ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಮೈಸೂರು ಜಿಲ್ಲೆ ಕೆಆರ್ ನಗರ ತಾಲ್ಲೂಕ್ ವಾರ್ಡ್ ನಂ.2ರ ನಿವೇಶನ\ ಖಾತಾ ಸಂ:9998ರ ಮಾಲೀಕರೊಂದಿಗೆ ಎದುರುದಾರರು ಶಾಮೀಲಾಗಿ, ಸರ್ಕಾರಿ ಜಾಗವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಹಾಗೂ ಸರ್ಕಾರಿ ಜಾಗದಲ್ಲಿ ಗೇಟ್, ಸ್ಟೇರ್ ಕೇಸ್ ಮತ್ತು ತೆರೆದ ರೀತಿ ಶೌಚಾಲಯವನ್ನು ಅಕ್ರಮವಾಗಿ ನಿರ್ಮಿಸಿದ್ದಾರೆ. ಈ ಬಗ್ಗೆ ಎದುರುದಾರರಿಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

Sd/-

ದೂರಿನ ಬಗ್ಗೆ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಲಾಗಿ, ದೂರುದಾರರು ಮತ್ತು ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರು ನಕ್ಷೆಯನ್ನು ಉಲ್ಲಂಘಿಸಿರುವುದು ಕಂಡು ಬಂದಿದೆ. ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರು ಸೆಟ್ ಬ್ಯಾಕ್ ಬಿಟ್ಟಿದ್ದು, ಮೊದಲನೇ ಅಂತಸ್ತಿಗೆ ಹೋಗಲು ಮೆಟ್ಟಿಲು ಹಾಕಿಕೊಂಡಿದ್ದಾರೆ. ದೂರುದಾರರು ಕೂಡ ಸೆಟ್ ಬ್ಯಾಕನ್ನು ಬಿಟ್ಟಿದ್ದು, ಮೇಲ್ಛಾವಣಿಯನ್ನು ಸೆಟ್ ಬ್ಯಾಕ್ ಅಳತೆವರೆಗೆ ಹಾಕಿದ್ದಾರೆ. ಆದ್ದರಿಂದ, ದೂರುದಾರರೇ ಅವರ ಮನೆಗೆ ಗಾಳಿ–ಬೆಳಕು ಬಾರದಂತೆ ಆರ್‌ಸಿಸಿ ಅನ್ನು ಹಾಕಿದ್ದು, ಅವರೇ ಆರ್‌ಸಿಸಿ ಅನ್ನು ತೆರವು ಮಾಡಿಕೊಳ್ಳಬೇಕಾಗಿದೆ. ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರ ಮನೆಯ ಕಡೆ ಗಾಳಿ–ಬೆಳಕು ಬರುವುದು ಕಂಡು ಬಂದಿದೆ. ಅವರ ಕ್ರಯಪತ್ರದ ಪ್ರಕಾರ ಅವರು 1 ಗುಂಟೆ ಜಮೀನನ್ನು ಖರೀದಿಸಿದ್ದು, ಅದರ ಪೂರ್ವ–ಪಶ್ಚಿಮ ಅಳತೆಯು 37.5 (ಪೂರ್ವ ದಿಕ್ಕಿನ ಕಡೆಗೆ 40 ಅಡಿಗಳು, ಪಶ್ಚಿಮ ದಿಕ್ಕಿನ ಕಡೆಗೆ 35.20 ಅಡಿಗಳು) ಉತ್ತರ–ದಕ್ಷಿಣ ಅಳತೆಯು 30.50 ಅಡಿಗಳಿದೆ. ಅವರು ಕಛೇರಿಯಿಂದ ಕಟ್ಟಡ ನಕ್ಷೆಯ ಅನುಮೋದನೆ ಪಡೆದು ಕಟ್ಟಡವನ್ನು ರಚಿಸಿದ್ದಾರೆ. ದೂರುದಾರರ ಕ್ರಯ ಪತ್ರದ ಪ್ರಕಾರ ಅವರು 1.25 ಗುಂಟೆ ಜಮೀನು ಖರೀದಿಸಿದ್ದಾರೆ. ಅದರಲ್ಲಿ ಯಾವುದೇ ಸರ್ಕಾರಿ ಜಾಗ ಇರುವುದಾಗಲೀ ಅಥವಾ ಒತ್ತುವರಿ ಆಗಿರುವುದಾಗಲೀ ಕಂಡು ಬಂದಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

> ದಿನಾಂಕ:13/08/13ರಂದು 30x40 ಅಡಿ ಅಳತೆಯ ನಿವೇಶನವನ್ನು ಖರೀದಿಸಿದ್ದು, ಅದರಲ್ಲಿ 25x28.5 ಅಡಿ ಅಳತೆಯ ಆರ್‌ಸಿಸಿ ಮನೆಯನ್ನು ಕಟ್ಟಡ ಪರವಾನಗಿ ಪಡೆದು ಕಟ್ಟಿಸಿದ್ದು, ಕಾನೂನಿನ್ವಯ ಸೆಟ್ ಬ್ಯಾಕನ್ನು ಬಿಟ್ಟಿದೆ. ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರು ಖರೀದಿಸಿದ ನಿವೇಶನದ ಅಳತೆ 33x33 ಆಗಿದೆ. ಆದರೆ, ಅವರು ಮನೆ ನಿರ್ಮಿಸುವಾಗ 33x40 ಅಡಿಗಳಲ್ಲಿ ನಿರ್ಮಿಸಿದ್ದು, ಪರವಾನಗಿಯ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಅವರು ಸೆಟ್ ಬ್ಯಾಕನ್ನು ಬಿಟ್ಟಿಲ್ಲ, ಅಲ್ಲದೇ ಚರಂಡಿಯ ಮೇಲೆ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿ ಗೇಟನ್ನು ಅಳವಡಿಸಿದ್ದಾರೆ. ತಮ್ಮ ಮನೆಯ ಮುಖ್ಯ ದ್ವಾರದ ಕಡೆಗೆ ಒತ್ತುವರಿ ಮಾಡಿ, ಶೌಚಾಲಯವನ್ನು ನಿರ್ಮಿಸಿ, ಗೋಡೆಯನ್ನು ಎತ್ತರಿಸಿ, ಶೌಚಾಲಯದ ಕೆಲಸವನ್ನು ಅರ್ಧಂಬರ್ಧ ಮಾಡಿ, ಸೊಳ್ಳೆ, ನೊಣ ಹಾಗೂ ವಿಷ ಜಂತುಗಳಿಗೆ ಅವಕಾಶ ಮಾಡಿಕೊಟ್ಟು ದುರ್ವಾಸನೆ ಬೀರುವಂತೆ ಮಾಡಿದ್ದಾರೆ. ಹಲವಾರು ಬಾರಿ ಈ ಸಂಬಂಧ ಪುರಸಭಾ ಕಾರ್ಯಾಲಯಕ್ಕೆ ದೂರು ನೀಡಿ, ಸರಿಪಡಿಸುವಂತೆ ಕೋರಿಕೊಂಡರೂ ನೋಟೀಸನ್ನು ನೀಡಿ ಮುಂದೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರ ಬಾಬ್ತು ದಿನಾಂಕ:22/03/14ರ ಕ್ರಯಪತ್ರದಲ್ಲಿ ಸದರಿಯವರು ಖರೀದಿಸಿದ ಖಾಲಿ ನಿವೇಶನದ ವಿಸ್ತೀರ್ಣ 33x33 ಅಡಿ ಆಗಿದ್ದು, ಪುರಸಭೆ ಆಸ್ತಿ ತೆರಿಗೆ ವಹಿಯಲ್ಲಿ ನಿವೇಶನದ ವಿಸ್ತೀರ್ಣವನ್ನು 33x33 ಅಡಿ ಎಂದು ಮೊದಲು ದಾಖಲಿಸಿದೆ. ನಂತರದಲ್ಲಿ ರಾಜಸ್ವ ನಿರೀಕ್ಷಕರ ವರದಿಯ ಆಧಾರದ ಮೇಲೆ ನಿವೇಶನದ ವಿಸ್ತೀರ್ಣವನ್ನು ನಂತರದಲ್ಲಿ 30x40 ಅಡಿ ಎಂದು ತಿದ್ದುಪಡಿ ಮಾಡಿದೆ. ಸದರಿ ತಿದ್ದುಪಡಿಯನ್ನು ದಿ:04/05/17ರಂದು ಮುಖ್ಯಾಧಿಕಾರಿಗಳ ಆದೇಶದಂತೆ ನೋಂದಾಯಿಸಿದೆಯೆಂದು ಆಸ್ತಿ ತೆರಿಗೆ ವಹಿಯಲ್ಲಿ ದಾಖಲು ಮಾಡಿದೆ. ದೂರುದಾರರು ಮತ್ತು ಸದರಿ ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರಿಬ್ಬರು ನಕ್ಷೆಯನ್ನು ಉಲ್ಲಂಘಿಸಿ, ಕಟ್ಟಡ ನಿರ್ಮಾಣ ಮಾಡಿರುವುದು ಸ್ಥಳ ತನಿಖೆ ಸಮಯದಲ್ಲಿ ಕಂಡು ಬಂದಿರುವುದಾಗಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ್ದಾರೆ.

6. ಆದ್ದರಿಂದ, ದೂರುದಾರರು ಮತ್ತು ಸದರಿ ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರಿಬ್ಬರು ನಕ್ಷೆಯನ್ನು ಉಲ್ಲಂಘಿಸಿ, ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಮತ್ತು ಸದರಿ ಶ್ರೀ.ಟಿ.ಎನ್.ನರಸಿಂಹ ನಾಯಕ್ ರವರು ಶೌಚಾಲಯದ ಕೆಲಸವನ್ನು ಪೂರ್ಣಗೊಳಿಸದೇ ಇರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 19.2.18

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.